International Journal of Kannada Research 2019; 5(1): 25-26




International Journal of Kannada Research
www.kannadajournal.com

**ISSN: 2454–5813**
IJKR 2019; 5(1): 25-26
© 2019 IJKR
www.kannadajournal.com
Received: 08-11-2018
Accepted: 11-12-2018

**ರಂಗಸ್ವಾಮಿ.ಡಿ**
ಸಂಶೋಧನಾ ವಿದ್ಯಾರ್ಥಿ
ದಕ್ಷಿಣ ಭಾರತೀಯ ಅಧ್ಯಯನ ವಿಭಾಗ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ ಮೈಸೂರು

**ಪ್ರೊ. ನಿರ್ಮಲ ರಾಜು**
ಇತಿಹಾಸ ಅಧ್ಯಯನ ವಿಭಾಗ, ಮಂಗಳ ಗಂಗೋತ್ರಿ, ಮಂಗಳೂರು ವಿಶ್ವವಿದ್ಯಾನಿಲಯ

**Correspondence**
**ರಂಗಸ್ವಾಮಿ.ಡಿ**
ಸಂಶೋಧನಾ ವಿದ್ಯಾರ್ಥಿ
ದಕ್ಷಿಣ ಭಾರತೀಯ ಅಧ್ಯಯನ ವಿಭಾಗ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ ಮೈಸೂರು
ಮೊಬೈಲ್

# ಚಾಮರಾಜನಗರ ಪ್ರದೇಶದ ಶಾಸನೋಕ್ತ ಜೈನಬಸದಿಗಳು

## ರಂಗಸ್ವಾಮಿ.ಡಿ, ಪ್ರೊ. ನಿರ್ಮಲ ರಾಜು

ಅರಿಕುಠಾರ ಎಂಬ ಹೆಗ್ಗಳಿಕೆಗೆ ಪಾತ್ರವಾದ ಚಾಮರಾಜನಗರ ಜಿಲ್ಲೆಯು ಐತಿಹಾಸಿಕವಾಗಿ ಮತ್ತು ಪಾರಂಪರಿಕವಾಗಿ ಮತ್ತು ಧಾರ್ಮಿಕವಾಗಿ ಹೆಚ್ಚಿನ ಮಹತ್ವ ಪಡೆದುಕೊಂಡಿದೆ.ಚಾಮರಾಜನಗರ ಪ್ರದೇಶದ ಕೆಲವೊಂದು ಊರುಗಳಲ್ಲಿ ಜೈನಬಸದಿಗಳಿಗೆ ಪೂರಕವಾಗಿ ಶಾಸನಗಳು ಕಂಡುಬರುತ್ತವೆ. ಇವುಗಳ ಆ ಕಾಲದ ರಾಜಕೀಯ ಸ್ಥಿತಿ ಧರ್ಮ ಅಲ್ಲದೆ ಬಸದಿಗಳಿಗೆ ಸಂಬಂಧಿಸಿದಂತೆ ದಾನ ನೀಡಿದ ಮತ್ತು ಬಸದಿಗಳನ್ನು ನಿರ್ಮಿಸಿದ ಬಗ್ಗೆ ವಿಚಾರಗಳು ತಿಳಿದುಬರುತ್ತದೆ. ಆಯಾ ಧರ್ಮಕ್ಕೆ ಪೂರಕವಾಗಿ ನಿರ್ಮಾಣಗೊಂಡಿರುವ ದೇವಾಲಯಗಳು ಮತ್ತು ಬಸದಿಗಳಲ್ಲಿ ಚರ್ಚೆಗೆ ಪೂರಕವಾದ ಶಾಸನುಲ್ಲೇಖಗಳನ್ನು ಬಳಸಿಕೊಂಡಿದ್ದೇವೆ. ಆದರೆ ಈಗ ಇವು ಅವುಗಳು ಶಾಸನಗಳಲ್ಲಿ ಉಲ್ಲೇಖವಾಗಿದು, ಈಗ ಆ ಉಲ್ಲೇಖಿತ ದೇವಾಲಯಗಳು, ಬಸದಿಗಳು ಕೆಲವೊಂದು ಸಂಪೂರ್ಣವಾಗಿ ಭಾಗಶಃ ನಾಶವಾಗಿ ವಾಶ್ತುಶೈಲಿ ಪ್ರಾಮುಖ್ಯತೆಯನ್ನು ಅಧ್ಯಯನ ಮಾಡಲು ಬಾರದೆ ಇರುವಷ್ಟು ಹಾಳಾಗಿ ಹೋಗಿರುವ ದೇವಾಲಯಗಳಿವೆ. ಅಂತಹ ದೇವಾಲಯ ಅಥವಾ ಬಸದಿಗಳನ್ನು ಇಲ್ಲಿ ಶಾಸನೋಲ್ಲೇಖ ಸ್ಮಾರಕವೆಂದು ಅಧ್ಯಯನ ನಡೆಸಲಾಗಿದೆ. ಇನ್ನೂ ಕೆಲವೊಂದು ದೇವಾಲಯಗಳಲ್ಲಿ ಕೆಲವೊಂದು ಶಾಸನಗಳು ನೇರವಾಗಿ ಆಯಾ ದೇವಾಲಯ ಬಸದಿಗಳಿಗೆ ಸಂಬಂಧಿಸದೆ ಇದ್ದರೂ ಕೂಡ ಆಯಾ ಊರುಗಳ ಮೇಲೆ ಬಸದಿಗಳ ಹೆಸರನ್ನು ತಿಳಿಸುವಂತಹ ಉಲ್ಲೇಖಗಳು ಪರೋಕ್ಷವಾಗಿ ಆಯಾ ಬಸದಿಗಳ ಇರುವಿಕೆಯನ್ನು ತಿಳಿಯಬಹುದಾಗಿದೆ. ಅಂತಹ ಸಮಯದಲ್ಲಿ ಕೂಡ ನಾವು ಆ ಶಾಸನಗಳನ್ನು ಇಲ್ಲಿ ಅಧ್ಯಯನ ನಡೆಸಲಾಗಿರುತ್ತದೆ.

ಚಾಮರಾಜನಗರ ಪಟ್ಟಣದ ಪಾರ್ಶ್ವನಾಥ ಬಸ್ತಿಯಲ್ಲಿರುವ ಕಲ್ಲಿನಲ್ಲಿ ಸುಮಾರು 34 ಸಾಲುಗಳುಳ್ಳ ಒಂದು ಶಾಸನ, ಅಲ್ಲದೆ 23 ಸಾಲುಗಳುಳ್ಳ ಮತ್ತೊಂದು ಶಿಲಾ ಶಾಸನಗಳಿವೆ. (21 ಚಾಮರಾಜನಗರ 83)ರ ಪ್ರಕಾರ ಕ್ರಿ.ಶ.1116ರ ಮೇ 29 ಸೋಮವಾರದಂದು ಶಾಸನವನ್ನು ಬರೆಸಲಾಗಿದೆ. ಇದು ಗಂಗವಾಡಿ 96000 ಪ್ರಂತ್ಯದ ಬಗ್ಗೆ ತಿಳಿಸಲಾಗಿದೆ.[1] (31 ಚಾಮರಾಜನಗರ 84) ಪ್ರಕಾರ ಅದೇ ಬಸ್ತಿಯ ಪ್ರಕಾರದಲ್ಲಿ ಪಶ್ಚಿಮಕಡೆಗೆ ನೆಟ್ಟಿರುವ ಕಲ್ಲಿನಲ್ಲಿ ಶಕವರ್ಷ 1201 ಅಂದರೆ ಕ್ರಿ.ಶ.1281 ಡಿಸೆಂಬರ್ 25 ರಂದು ಶಾಸನ ಬರೆಸಲಾಸ್ಗಿದೆ. ಇದು ಹೊಯ್ಸಳ ಮೂರನೇ ವೀರನರಸಿಂಹನ ಕಾಲದ ಶಾಸನವಾಗಿದೆ. ಆದ ಕಾರಣ ಈ ಬಸದಿಯು ಹೊಯ್ಸಳರ ಕಾಲದಲ್ಲಿಯೂ ಅನೇಕ ರೀತಿಯ ಕೊಡುಗೆಯನ್ನು ಪಡೆದುಕೊಂಡಿದೆ ಎಂದು ತಿಳಿಯಬಹುದಾಗಿದೆ.[2] ಪಾರ್ಶ್ವನಾಥ ಬಸದಿಯ ಬಲಪಾರ್ಶ್ವದ ಹೊರಗೋಡೆಗೆ ಒರೆಗಿಸಿರುವ ಒಂದು ಕಲಿನಲ್ಲಿ ಕ್ರಿ.ಶ.1518 ರ ಕಾಲಕ್ಕೆ ಸೇರಿದ ಒಂದು ಶಿಲಾ ಶಾಸನವಿದೆ. ಈ ಶಾಸನವು ವಿಜಯ ನಗರ ಅರಸರ ಕಾಲಕ್ಕೆ ಸೇರಿದ ಈ ಶಾಸನದ ಪ್ರಕಾರ ಶ್ರೀ ಮತ್ಸರಮಗಂಭೀರ ಸ್ವಾದಾಮೋಘಲಾಂಚ್ಛ ನಂ ಜೀಯಾತ್ರೈ ಲೋಕ್ಯನಾಥಸ್ಯ ಶಾಸನಂ ಜಿನಶಾಸನಂ ಸ್ವಸ್ತಿ ಶ್ರೀಶಕ ವರುಷ 1440ನೇ ಈಶ್ವರನಾಡು ಸಂವತ್ಸರದ ಫಾಲ್ಗುಣ ಬಹುಳ 10 ಶನಿವಾರದಲ್ಲು ಅರಿಕುಠಾರದ ಗ್ರಾಮದ ಮಹಾಪ್ರಭು ಕಾಮಯ್ಯ ನಾಯಕರ ತನುಜ ವೀರೈಯನಾಯಕರು ವಿಜಯನಾಥದೇವರಿಗೆ ಅಚಂದ್ರಾರ್ಕ್ಕವಾಗಿ ಗ್ರಾಮಕ್ಕೆ ಸೇರಿದ ಮುಣಚಣಹಳ್ಳಿ ಗ್ರಾಮವನ್ನು ಕೊಟ್ಟ ಸೇವೆ ಶುಭಮಸ್ತು. ಸ್ವದತ್ತಂ ಪರದತ್ತಂ ವಾ ಯೋ ಹರೇತ ವಸುಂಧರಾಂ ಷಷ್ಠಿರ್ವರುಷ ಸಹ ಪ್ರಾಣಿ ವಿಷ್ಠಾಯಾಂ ಜಾಯತೇ ಕ್ರಿಮಿಃ ಎಂದು ಬರೆಯಲಾಗಿದೆ.[3] ಅಲ್ಲದೆ ಮತ್ತೊಂದು ಶಾಸನದಲ್ಲಿ ಅಂದರೆ 14ನೇ ಶತಮಾನಕ್ಕೆ ಸೇರಿದ ಜೈನರ ಹೆಸರನ್ನು ತಿಳಿಸುವಂತಹ ಬೊಪ್ಪಯ್ಯನ ಬಗ್ಗೆ ಇತ್ತಿಸಲಾಗಿದೆ.[4]

ಉಮ್ಮತ್ತೂರು ಗ್ರಾಮದಲಿ ಕಂಡುಬರುವ ವರ್ಧಮಾನಸ್ವಾಮಿ ಬಸದಿಯ ಗರ್ಭಗುಡಿಯ ಹೊರಗೋಡೆಯ ಮೇಲೆ ಶಾಸನವಿದೆ. ಈ ಶಾಸನ ಪಾಠದಲ್ಲಿ ಪೆನುಗೊಂಡ ಪಾರ್ಶ್ವಪಂಡಿತರು ವರ್ಧಮಾನಸ್ವಾಮಿ ಸೇವೆ ಎಂದು ತಿಳಿಸಲಾಗಿದೆ.

ಇದರ ಪ್ರಕಾರ ಈ ಶಾಸನವು ಕ್ರಿ.ಶ.18ನೇ ಶತಮಾನಕ್ಕೆ ಸೇರಿದೆ. [5] ಮಲೆಯೂರು ಬೆಟ್ಟದ ಮೇಲೆ ಸೇವಗಣದ ನಿಶಿಧಿಗೆ ಈಶಾನ್ಯದ ಬಂಗೆಯ ಮೇಲೆ ಕ್ರಿ.ಶ.16ನೇ ಶತಮಾನದ ಶಾಸನದಲಿ ಕಾಲೋಗ್ರ ಗಣದ ಮುನಿ ಚಂದ್ರ.ದೆಅನ ಪಾದ ಅವರ ಸಿಷ್ಯ ಆದಿದಾಸ ಬರೆಸಿದ ಎಂದು ತಿಳಸಲಾಗಿದೆ. [6]

ಬಲಿಕಲ್ಲಿಗೆ ಈಶಾನ್ಯದ ಬಂಡೆಯ ಮೇಲೆ ಶಕವರ್ಷ 1579 ಅಂದರೆ ಕ್ರಿ.ಶ.1674 ಡಿಸೆಮ್ಬರ್ 22ರ ಶಾಸನದಲ್ಲಿ ವರಪಾರ್ಶ್ವನಾಥನ ಬಗ್ಗೆ ತಿಳಸುತ್ತದೆ. [7] ಅದೇ ಬೆಟ್ಟದಲ್ಲಿ ಗುಂಡಿನ ಪಶ್ಚಿಮ ಭಾಗದಲ್ಲಿ ಕ್ರಿ.ಶ.1819 ಮೇ 28 ಶುಕ್ರವಾರದಂದು ಬರೆಸಿದ ಶಿಲಾಶಾಸನದಲ್ಲಿ ಶ್ರೀ ಮೂಲ ಸಂಘ ದೇಶೀಗಣ ಪುಸ್ತಕ ಗಚ್ಚ ಇಂಗಲೇಶ್ವರ ಬಳ ಕೊಂಡಕುಂದಾನ್ವಯದ ಸಂಬಂಧಿಗಳು ಶ್ರುತಮುನಿಗಳ ಪದಪದ್ಮಭೃಂಗರುಂ ಶುಬಚಂದ್ರದೇವರ ಪ್ರಿಯಾಗ್ರ ಶಿಷ್ಯರುಂ ಶ್ರೀ ಮತು ಸಕಲಕಲಾ ಪ್ರವೀಣಮಪ್ಪ ಶ್ರೀಕೊಪಣದ ಚಂದ್ರಕೀರ್ತಿ ದೇವರು ಮಾಡಿಸಿದರು. ಶ್ರೀ ಚಂದ್ರಪ್ರಭ ಸ್ವಾಮಿಗಳನ್ನು ಎಂದು ತಿಳಿದುಬರುತ್ತದೆ. [8]

362ನೆಯ ಶಾಸನದ ಮೇಲುಗಡೆ ಬಂಡೆಯ ಮೇಲಿರುವ ಹೈದ್ನಾಲ್ಕು ವಿಗ್ರಹಗಳ ಒಳಗೆ ಅನೇಕ ಹೆಸರುಗಳನ್ನು ಹೆಸರಿಸಲಾಗಿರುತ್ತದೆ. ಅವುಗಳಲ್ಲಿ ಕೆಲವೊಂದು ಜೈನಪರಂಪರೆಯ ಹೆಸರುಗಳಿವೆ. ಅವುಗಳಲ್ಲಿ ಕ್ವಣದ ಚಂದಕೀರ್ತಿ, ದೇವರು, ಜಿಣ್ಣದೇವರು, ಶಿಭಚಂದ್ರದೇವರು, ಪಂಡಿತ ದೇವರು ಅಭಯಸೂರಿಗಳು ಮಾಧವ ಚಂದ್ರದೇವರು ಶ್ರೀ ಹಾಗೂ ಕನಕಪೆರಿಯರು ಎಂಬ ಹೆಸರುಗಳಿವೆ. [9] ಅದೇ ಬೆಟ್ಟದಲ್ಲಿ ಗುಂಡಿನ ಪೂರ್ವಭಾಗದಲ್ಲಿ ಶಕವರ್ಷ 1277 ಅಂದರೆ ಕ್ರಿ.ಶ.1355 ಏಪ್ರಿಲ್12 ಭಾನುವಾರದ ಶಾಸನದ ಪ್ರಕಾರ ನೋಡುವುದಾದರೆ, ಜೈನ ಪರಂಪರೆಯ ಶ್ರೀ ಮೂಲಸಂಘ ದೇಶಿಯಗಣ ಕೊಂಡಕುಂದಾನ್ವಯ ಪುಸ್ತಕಗಚ್ಛ ಹನಸೋಗೆಯ ಬಳಯ ಶ್ರೀ ಮದ್ರಾಯರಾಜಗುರು ಮಮ್ಡಳಾಚಾರ್ಯ ಸಮಯಾಚರಣರುಮ ಎಂಬ ಬಗ್ಗೆ ತಿಳಿದುಬರುತ್ತದೆ.[10]

ಅದೇ ಬೆಟ್ಟದ ಗುಂಡಿನಲಿರುವ ಚಂದ್ರಪ್ರಭಸ್ವಾಮಿಗೆ ಪಶ್ಚಿಮದ ಅರೆಯಲ್ಲಿ ಇರುವ ಶಾಸನ ಪ್ರಕಾರ ಕ್ರಿ.ಶ.1760ರಲ್ಲಿ ಶ್ರೀ ವರ್ಧಮಾನನ ಬಗ್ಗೆ ಹಾಗೂ ದೇವಚಂದ್ರನು ಪಿತೃಸಂತಾನದ ವಿಚಾರ ತಿಳಿದುಬರುತ್ತದೆ. [11]

ಅದೇ ಬೆಟ್ಟದ ದೇವಸ್ಥಾನದ ಕೋಟೆ, ಪೂರ್ವಭಾಗದ ಕಲ್ಲಿನಲ್ಲಿ ಜೈನಧರ್ಮದವನು ಜಿನಬಿಂಬವನ್ನು ಅಲ್ಲದೆ ಮುನಿಗಳ ಪ್ರತಿಬಿಂಬವನ್ನು ರಣಸ್ತಂಭದಲ್ಲಿ ಮಾಡಿಸಿರುವ ಬಗ್ಗೆ ತಿಳಿದುಬರುತ್ತದೆ. [12] ಅದೇ ಬೆಟ್ಟದ ಪಾರ್ಶ್ವನಾಥ ಬಸದಿಯ ಪ್ರಕಾರದಲ್ಲಿ ದಕ್ಷಿಣ ಕಡೆ ನಿಲ್ಲಿಸಿರುವ ಕಲ್ಲಿನಲ್ಲಿ ಕ್ರಿ.ಶ.14ನೆಯ ಶತಮಾನಕ್ಕೆ ಸೇರಿದ ಶಾಸನವಿದ್ದು, ಬಾಹುಬಲಿ ಪಂಡಿತದೇವರು ಮತ್ತು ನಯಕೀರ್ತಿ ತ್ರಿಭುನಂದನನ ಬಗ್ಗೆ ತಿಳಿದುಬರುತ್ತದೆ. [13]

ಪಾರ್ಶ್ವನಾಥ ಬಸದಿಯ ದಕ್ಷಿಣ ಬಿದ್ದಿರುವ ಕಲ್ಲಿನಲ್ಲಿ ಕ್ರಿ.ಶ.18ನೇ ಶತಮಾನಕ್ಕೆ ಸೇರಿದ ಶಾಸನವಾಗಿದ್ದು ಇದರಲ್ಲಿ ಶ್ರೀ ಪದ್ಮಾವತಿ ಪಾದಾರವಿಂದವೇ ಬಗ್ಗೆ ತಿಳಿದುಬರುತ್ತದೆ. [14]

ಬಸದಿಯ ಪ್ರಾಕಾರದಲ್ಲಿ ಚಪಪ್ರಮಂಟಪದಲ್ಲಿ ಕಲ್ಲಿನಲ್ಲಿ ಸುಮಾರು 18 ಸಾಲುಗಳುಳ್ಳ ಶಾಸನವಿದ್ದು, ಈ ಶಾಸನವು ಶಕವರ್ಷ 1103 ಅಂದರೆ ಕ್ರಿ.ಶ.1181 ಸೆಪ್ಟೆಂಬರ್ 19, ಶನಿವಾರದಂದು ಶಾಸನವನ್ನು ಬರೆಸಲಾಗಿದೆ. ಇದು ಜೈನ ಪರಂಪರೆಯವರ ಅನೇಕ ಹೆಸರುಗಳನ್ನು ಸೂಚಿಸುತ್ತಾ ಜೈನ ಇತಿಹಾಸಕ್ಕೆ ಉತ್ತಮ ಶಾಸನವಾಗಿದೆ.[15] ಕನಕಗಿರಿ ಮಲೆಯೂರು ಬಸದಿಯಲ್ಲಿರುವ ತಾಮ್ರಶಾಸನದ ಪ್ರಕಾರ ನೋಡುವುದಾದರೆ ಶಕವರ್ಷ 1344 ಅಂದರೆ ಕ್ರಿ.ಶ.1422ರಲ್ಲಿ ಶಾಸನವನ್ನು ಬರೆಸಲಾಗಿದೆ. ಇದು ವಿಜಯನಗರ ಅರಸರ ಕಾಲಕ್ಕೆ ಸೇರಿದ ತಾಮ್ರಶಾಸನವಾಗಿದೆ. ಈ ಶಾಸನದಲ್ಲಿ ಶ್ರೀ ವೀರಪ್ರತಾಪ ದೇವರಾಯ ಮಹಾರಾಯರಕುಮಾರ ಹರಿಹರರಾಯ ರಾಜರು ಕನಕಗಿರಿ ಶ್ರೀವಿಜಯನಾಥದೇವರಿಗೆ ಅನೇಕ ರೀತಿಯ ಸೇವೆಯನ್ನು ನೀಡಿರುವ ವಿಚಾರ ತಿಳಿದುಬರುತ್ತದೆ. [16] ಅದೇ ಬೆಟ್ಟದಲ್ಲಿ ಮುನಿಚಂದ್ರ ನಿಷಿಧಿಯ ಕಲ್ಲಿನ ಮೇಲೆ ಕ್ರಿ.ಶ.16ನೇ ಶತಮಾನಕ್ಕೆ ಸೇರಿದ ಶಾಸನವಿದೆ. ಈ ಶಾಸನದ ಪ್ರಕಾರ ಈಶ್ವರ ಸಂವತ್ಸರದ ಶ್ರಾವಣ ಬಹುಳ ಶ್ರೀಮೂಲ ಸಂಘ ಕಾಲೋಗ್ರಹಣದ ಮುನಿಚಂದ್ರದೇವರಿಗೆ ನಿಷಿಯು ಇತು ಅವರ ಪಾದವನ್ನು ಅವರ ಶಿಷ್ಯ ಆದಿ ದಾಸ ಅವಿಯಂಗಣನು ಮಾಡಿಸಿರುವ ವಿಚಾರ ತಿಳಿದುಬರುತ್ತದೆ. [17]

ಚಾಮರಾಜನಗರ ಬಸ್ತಿಪುರ ಗ್ರಾಮ, ಅಂದರೆ ಬೇಚಿರಾಕ್ ಗ್ರಾಮದಲ್ಲಿ ಜಿನದೇವರ ಹಿಂದೆ ಬಿದ್ದಿರುವ ವೀರಗಲ್ಲು ಶಾಸನದ ಪ್ರಾಕಾರ ಕ್ರಿ.ಶ.10ನೇ ಶತಮಾನಕ್ಕೆ ಸೇರಿದ ಶಾಸನವಾಗಿದ್ದು, ಜೈನ ಪರಂಪರೆಯನ್ನು ವ್ಯಕ್ತಪಡಿಸುತ್ತದೆ. [18]

ಹರವೆ ಆದೀಶ್ವರ ಬಸದಿಯ ದಕ್ಷಿಣ ಕಡೆ ಮಂಟಪದಲ್ಲಿ ಕ್ರಿ.ಶ.1486 ಅಕ್ಟೋಬರ್ 11 ರಂದು ಶಾಸನ ಬರೆಸಲಾಗಿದೆ. ಸ್ವಸ್ತಿ ಶ್ರೀ ಶಕವರುಷ 1408ನೆ ಪರಾಭವ ಸಂವತ್ಸರದ ಅಶ್ವೀಜ ಶು 13 ಲು ನಿಲಿಸಿದ ದೇವರಸನ ಹಿರಿಯ ಹೆಂಡತಿ ಸೋಮಾಯಿಯ ನಿಷಿದ್ಯ ಮೇಲೆ ಇದೆ. ಇದು ಜೈನರ ಇತಿಹಾಸವನ್ನು ವ್ಯಕ್ತಪಡಿಸುತ್ತದೆ. [19]

ಹರವೆಯ ಅದೇ ಬಸದಿಯ ಪ್ರಾಕಾರದಲ್ಲಿ ಶಾಸನ ಮಂಟಪದ ಮೇಲ್ಭಾಗದ ತೊಲೆಯ ಮೇಲೆ ಶಕವರ್ಷ 1404ರ ಕಾಲಕ್ಕೆ ಸೇರಿದ ಶಾಸನವಿದೆ. ಶ್ರೀ ಮನ್ಮಹಾಮಂಡಳೇಶ್ವರ ಶ್ರೀ ವೀರಸೋಮರಾಯ ಒಡೆಯರ್ ಕರಣೀಕ ದೇವರಸನು ಹರವೆಯಲ್ಲಿ ಚೈತ್ಯಾಲಯ ಪಾಕವನ್ನು ಹಾಗೂ ಶಾಲೆಗಳನ್ನು ಮಾಡಿಸುವುದರ ಬಗ್ಗೆ ತಿಳಸುತ್ತದೆ. ಹೀಗೆ ಚಾಮರಾಜನಗರ ಪ್ರದೇಶದಲ್ಲಿ ಜೈನ ಪರಂಪರೆಗೆ ಪೂರಕವಾಗಿ ಅನೇಕ ಶಾಸನಗಳು ಮುಕ್ತವಾಗಿರುವುದು ತಿಳಿದುಬರುತ್ತದೆ.

**ಅಡಿಟಿಪ್ಪಣಿಗಳು**

1. ಎ.ಕ.ಸಂಪುಟ-4, ಚಾಮರಾಜನಗರ, ಶಾಸನ ಸಂಖ್ಯೆ-2
2. ಎ.ಕ.ಸಂಪುಟ-4, ಚಾಮರಾಜನಗರ, ಶಾಸನ ಸಂಖ್ಯೆ-3
3. ಎ.ಕ.ಸಂಪುಟ-4, ಚಾಮರಾಜನಗರ, ಶಾಸನ ಸಂಖ್ಯೆ-60
4. ಎ.ಕ.ಸಂಪುಟ-4, ಚಾಮರಾಜನಗರ, ಶಾಸನ ಸಂಖ್ಯೆ-61 (೦ – 1931)
5. ಎ.ಕ.ಸಂಪುಟ-4, ಚಾಮರಾಜನಗರ, ಶಾಸನ ಸಂಖ್ಯೆ-91
6. ಎ.ಕ.ಸಂಪುಟ-4, ಚಾಮರಾಜನಗರ, ಶಾಸನ ಸಂಖ್ಯೆ-359
7. ಎ.ಕ.ಸಂಪುಟ-4, ಚಾಮರಾಜನಗರ, ಶಾಸನ ಸಂಖ್ಯೆ-360
8. ಎ.ಕ.ಸಂಪುಟ-4, ಚಾಮರಾಜನಗರ, ಶಾಸನ ಸಂಖ್ಯೆ-362
9. ಎ.ಕ.ಸಂಪುಟ-4, ಚಾಮರಾಜನಗರ, ಶಾಸನ ಸಂಖ್ಯೆ-363
10. ಎ.ಕ.ಸಂಪುಟ-4, ಚಾಮರಾಜನಗರ, ಶಾಸನ ಸಂಖ್ಯೆ-365
11. ಎ.ಕ.ಸಂಪುಟ-4, ಚಾಮರಾಜನಗರ, ಶಾಸನ ಸಂಖ್ಯೆ-366
12. ಎ.ಕ.ಸಂಪುಟ-4, ಚಾಮರಾಜನಗರ, ಶಾಸನ ಸಂಖ್ಯೆ-367
13. ಎ.ಕ.ಸಂಪುಟ-4, ಚಾಮರಾಜನಗರ, ಶಾಸನ ಸಂಖ್ಯೆ-369
14. ಎ.ಕ.ಸಂಪುಟ-4, ಚಾಮರಾಜನಗರ, ಶಾಸನ ಸಂಖ್ಯೆ-370
15. ಎ.ಕ.ಸಂಪುಟ-4, ಚಾಮರಾಜನಗರ, ಶಾಸನ ಸಂಖ್ಯೆ-371
16. ಎ.ಕ.ಸಂಪುಟ-4, ಚಾಮರಾಜನಗರ, ಶಾಸನ ಸಂಖ್ಯೆ-372
17. ಎ.ಕ.ಸಂಪುಟ-4, ಚಾಮರಾಜನಗರ, ಶಾಸನ ಸಂಖ್ಯೆ-374
18. ಎ.ಕ.ಸಂಪುಟ-4, ಚಾಮರಾಜನಗರ, ಶಾಸನ ಸಂಖ್ಯೆ-378
19. ಎ.ಕ.ಸಂಪುಟ-4, ಚಾಮರಾಜನಗರ, ಶಾಸನ ಸಂಖ್ಯೆ-389